OS No.147/2013

PW.3

**ಸಾಕ್ಷಿಯನ್ನು ದಿನಾಂಕಃ 19.09.2024 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ  ಪ್ರತಿವಾದಿ ನಂ.1 ರವರ ಪರ ಶ್ರೀ.ಎ.ಕೆ.ಓ ವಕೀಲರಿಂದಃ</u>**

ನನ್ನ ಊರು ಮೇಟಗುಡ್ಡ ಗ್ರಾಮ ಇರುತ್ತದೆ. ನನಗೆ ಈಗ 70 ವರ್ಷಗಳು ಆಗಿರುತ್ತವೆ ಮತ್ತು ನಾನು ಶಾಲೆಯನ್ನು ಕಲಿತಿರುವುದಿಲ್ಲ. ಈ ದಾವೆಯನ್ನು ವಾದಿಯರು ಪ್ರತಿವಾದಿಯರ ಮೇಲೆ ಮಾಡಿರುತ್ತಾರೆ. ನಾನು ಕುರಿ ಮೇಯಿಸುತ್ತಿದ್ದರಿಂದ ವಾದಿಯರ ಪರಿಚಯ ನನಗೆ ಆಗಿರುತ್ತದೆ. ನೀವು ವಾದಿಯರ ಮನೆಯಲ್ಲಿ ಎಷ್ಟು ಸಲ ಹಿರಿಯತನ ಮಾಡಿದ್ದಿರಿ ಎಂದರೆ ಸಾಕ್ಷಿಯು ಈಗ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಈ ದಾವೆಯ ದಾವಾ ಆಸ್ತಿಗಳ ಸರ್ವೆ ನಂಬರಗಳನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಮೇಟಗುಡ್ಡ ಮತ್ತು ಜಾಲಿಬೇರಿ ಗ್ರಾಮಗಳ ಹದ್ದಿಯಲ್ಲಿ ಇರುತ್ತವೆ.  1957 ನೇ ಸಾಲಿನಲ್ಲಿ ವಾದಿಯರ ಮತ್ತು ಪ್ರತಿವಾದಿಯರ ಅಜ್ಜಂದಿರ ನಡುವೆ ವಾಟ್ನಿ ಆಗಿರುತ್ತದೆ ಎಂದರೆ ಸಾಕ್ಷಿಯು ವಾಟ್ನಿ ಮಾಡಿಕೊಂಡಿರುತ್ತಾರೆ ಮತ್ತು ವಾಟ್ನಿ ಪ್ರಕಾರ ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಾಟ್ನಿಗೆ ಕುರಿತಂತೆ ಮ್ಯುಟೇಶನ ಡೈರಿ ನಂ.299  ಮಂಜೂರಾಗಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. 1963 ನೇ ಸಾಲಿನಲ್ಲಿ ಜಾಲಿಬೇರಿ ಗ್ರಾಮದ ಆಸ್ತಿಗಳಿಗೆ ಸಂಬಂದಿಸಿದಂತೆ ವಾದಿಯರ ಮತ್ತು ಪ್ರತಿವಾದಿಯರ ಅಜ್ಜಂದಿರ ನಡುವೆ ವಾಟ್ನಿ ಆಗಿರುತ್ತದೆ ಎಂದರೆ ಸರಿ. ಇದಕ್ಕೆ ಸಂಬಂದಿಸಿದಂತೆ ಡೈರಿ ನಂ.562 ಮಂಜೂರಾಗಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. 1963 ನೇ ಸಾಲಿನಲ್ಲಿ  ವಾಟ್ನಿ ಆದ ಪ್ರಕಾರ ವಾದಿಯರು ಮತ್ತು ಪ್ರತಿವಾದಿಯರು ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಸ್ವಾಧೀನತೆಯಲ್ಲಿ ಇರುತ್ತಾರೆ ಎಂದರೆ ಸರಿ.

ನನ್ನ ಸಾಕ್ಷ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ.  2012-13 ನೇ ಸಾಲಿನಲ್ಲಿ ವಾದಿಯರು ಪ್ರತಿವಾದಿಯರಿಗೆ ಗೊತ್ತಿಲ್ಲದೆ ತಮ್ಮ ಜಮೀನುಗಳಿಗೆ ಸಂಬಂದಿಸಿದಂತೆ  ಡೈರಿ ನಂ.ಟಿ-36/2012-13 ರಂತೆ ಪೋಡಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ದಿನ ನ್ಯಾಯಾಲಯಕ್ಕೆ ಸಾಕ್ಷ ನುಡಿಯಲು  ವಾದಿ ನಂ.1 ರವರು ಕರೆದುಕೊಂಡು ಬಂದಿರುತ್ತಾರೆ. ವಾದಿಯರು ನನಗೆ ಸಂಬಂದಿಕರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಪರಿಚಯಸ್ಥರು ಎಂದು ನುಡಿಯುತ್ತಾರೆ. ನಾನು ವಾದಿಯರಿಗೆ ಅನೂಕೂಲ ಮಾಡಲೇಂದು ಸುಳ್ಳು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರ ಮತ್ತು ಪ್ರತಿವಾದಿಯರ ಮನೆತನಕ್ಕೆ ಸಂಬಂದಿಸಿದ ಆಸ್ತಿಗಳಲ್ಲಿ ಯಾವುದೇ ಸಮಯದಲ್ಲಿ ಹಿರಿಯತನ ಮಾಡಿರುವುದಿಲ್ಲ ಎಂದರೆ ಸರಿ .

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ